# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

("ವಿ ಟಿ ಯು ಅಧಿನಿಯಮ ೧೯೯೪" ರ ಅಡಿಯಲ್ಲಿ ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದ ರಾಜ್ಯ ವಿಶ್ವವಿದ್ಯಾಲಯ)

'ಜ್ಞಾನ ಸಂಗಮ', ಬೆಳಗಾವಿ - ೫೯೦ ೦೧೮ ಕರ್ನಾಟಕ ರಾಜ್ಯ

# *Visvesvaraya Technological University*

*(State University of Government of Karnataka Established as per the VTU Act, 1994)*

**"Jnana Sangama", Belagavi-590 018, Karnataka State, India**

**Dr. Prasad B. Rampure**, M.E., Ph.D.,
**REGISTRAR**

**Phone : (೦೮೩೧) ೨೪೯೮೧೦೦**
**Fax : (೦೮೩೧) ೨೪೦೫೪೬೭**


**Ref: VTU/Aca/2025-26/A7/Gr./** 6628

**Date:** 24 MAR 2026

## ಸುತ್ತೋಲೆ

**ವಿಷಯ: ಕನ್ನಡ ಭಾಷೆಯ ಗೌರವವೇ ನಮ್ಮ ಗೌರವ-ಕನ್ನಡವೇ ಶ್ರೇಷ್ಠ, ಕನ್ನಡಕ್ಕಾಗಿ ಬದುಕೋಣ ಕನ್ನಡಕ್ಕಾಗಿ ಬೆಳೆಯೋಣ.**

ಉಲ್ಲೇಖ: ೧) ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, ಇವರ ಪತ್ರ ಸಂಖ್ಯೆ: ಕಅಪ್ರಾ/ಅ/೪೯೩/೨೦೨೬, ದಿನಾಂಕ: ೦೫/೦೧/೨೦೨೬.
೨) ಮಾನ್ಯ ಕುಲಪತಿಗಳ ಅನುಮೋದನೆಯ ದಿನಾಂಕ: ೨೦/೦೩/೨೦೨೬.

**ಕನ್ನಡವು ಕರ್ನಾಟಕ ರಾಜ್ಯದ ಅಧಿಕೃತ ಭಾಷೆಯಾಗಿದ್ದು**, ಅದಕ್ಕೆ ಸಂವಿಧಾನಾತ್ಮಕ ಹಾಗೂ ಕಾನೂನಾತ್ಮಕ ಗೌರವವಿದೆ. **ಕನ್ನಡ ಭಾಷೆಯ ಕುರಿತು ಗೌರವ ಮತ್ತು ಘನತೆಯನ್ನು ಕಾಪಾಡುವುದು** ಎಲ್ಲ ಶಿಕ್ಷಣ ಸಂಸ್ಥೆಗಳ ಆದ್ಯ ಕರ್ತವ್ಯವಾಗಿರುತ್ತದೆ. ಯಾವುದೇ ಸಂದರ್ಭದಲ್ಲಿಯೂ **ಕನ್ನಡ ಭಾಷೆ, ಸಾಹಿತ್ಯ ಹಾಗೂ ಸಂಸ್ಕೃತಿಗೆ ಅವಮಾನವಾಗುವ ರೀತಿಯ ವರ್ತನೆಗಳು ಸಂಪೂರ್ಣವಾಗಿ ಖಂಡನೀಯವಾಗಿದೆ.**

ಆದ್ದರಿಂದ, ವಿಶ್ವವಿದ್ಯಾಲಯವು ಈ ಮೂಲಕ ಕೆಳಕಂಡಂತೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡುತ್ತಿದೆ.

೧. ಎಲ್ಲ ಕಾಲೇಜುಗಳ ಪ್ರಾಂಶುಪಾಲರು/ ಮುಖ್ಯಸ್ಥರು ಈ ವಿಷಯದಲ್ಲಿ ವೈಯಕ್ತಿಕ ಹೊಣೆಗಾರಿಕೆ ವಹಿಸಿ, ಕಾಲೇಜುಗಳಲ್ಲಿ **ಭಾಷಾ ಗೌರವ ಮತ್ತು ಸೌಹಾರ್ದತೆಯನ್ನು** ಕಾಪಾಡುವಂತೆ ಕ್ರಮವಹಿಸಬೇಕು.
೨. ಒಂದು ವೇಳೆ **ಯಾವುದೇ ಉಲ್ಲಂಘನೆ ಕಂಡುಬಂದಲ್ಲಿ**, ಸಂಬಂಧಪಟ್ಟ ಸಿಬ್ಬಂದಿಯ ವಿರುದ್ಧ ನಿಯಮಾನುಸಾರ **ಶಿಸ್ತು ಕ್ರಮ** ಜರುಗಿಸಲಾಗುವುದು.
೩. ಯಾವುದೇ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳೊಂದಿಗೆ ಹಾಗೂ ಇತರರೊಂದಿಗೆ ಸಂವಹನ ಮಾಡುವ ವೇಳೆ ಕನ್ನಡ ಭಾಷೆಯ ಬಗ್ಗೆ **ಅವಹೇಳನಕಾರಿ ಹಾಗೂ ಅಸಮಂಜಸ ಪದಗಳನ್ನು** ಬಳಸಬಾರದು.
೪. ಈ ಸೂಚನೆಗಳನ್ನು ಎಲ್ಲ ಸಿಬ್ಬಂದಿಗಳಿಗೆ ತಕ್ಷಣವೇ ತಿಳಿಸಿ, **ಕಡ್ಡಾಯವಾಗಿ** ಪಾಲನೆ ಮಾಡುವಂತೆ ಖಚಿತಪಡಿಸಬೇಕು.

ಸದರಿ ನಿರ್ದೇಶನವನ್ನು ತಕ್ಷಣದಿಂದಲೇ ಮತ್ತು ಕಟ್ಟುನಿಟ್ಟಾಗಿ ಅನುಸರಿಸಬೇಕೆಂದು ಆದೇಶಿಸಲಾಗಿದೆ.

**ಕುಲಸಚಿವರು**

**ಇವರಿಗೆ,**
**ಎಲ್ಲಾ ಸಂಯೋಜಿತ, ಘಟಕ ಹಾಗೂ ಸ್ವಾಯತ್ತ ಮಹಾವಿದ್ಯಾಲಯದ ಪ್ರಾಂಶುಪಾಲರಿಗೆ.**

***ಪ್ರತಿ ಮಾಹಿತಿಗಾಗಿ :***
೧. ಮಾನ್ಯ ಕುಲಪತಿಗಳು, ವಿತಾವಿ, ಬೆಳಗಾವಿ ಅವರ ಕಾರ್ಯದರ್ಶಿಗಳ ಮುಖಾಂತರ.
೨. ಕುಲಸಚಿವರು (ಮೌಲ್ಯಮಾಪನ), ವಿತಾವಿ, ಬೆಳಗಾವಿ ಅವರ ಆಪ್ತ ಕಾರ್ಯದರ್ಶಿಗಳ ಮುಖಾಂತರ.
೩. ಪ್ರಭಾರ ನಿರ್ದೇಶಕರು, ಗಣಕ ಅಂತರ್ಜಾಲ ನಿಯಂತ್ರಣ ಕೇಂದ್ರ, ವಿತಾವಿ, ಬೆಳಗಾವಿ ಇವರು ಈ ಸುತ್ತೋಲೆಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಲಾಗಿದೆ.